


ಬ್ರೆಕ್ಟ್ ಬೀದಿಯ ಕೈಮರದಡಿಯಲ್ಲಿ ಲೇಖಕರು

ಜರ್ಮನಿ ಬಹುಜನಾಂಗೀಯ ದೇಶವಾಗಲು, ಜರ್ಮನ್ ಸರ್ಕಾರದ ಉದಾರವಾದಿ ವಲಸೆ ನೀತಿಯೂ ಕಾರಣ. ಸರ್ಕಾರದ ನೀತಿಯನ್ನು ಸಂಪ್ರದಾಯಸ್ಥರು ಪೂರ್ತಿ ಒಪ್ಪಿಲ್ಲ. ಇದಕ್ಕೆ ಅವರ ಕ್ಯಾಥೊಲಿಕ್ ಪಂಥದ ಜಿಗುಟುತನವೂ ಒಂದು ಕಾರಣವಿರಬಹುದು. ಹೀಗಾಗಿ ಜರ್ಮನ್ ಸಮಾಜದಲ್ಲಿ ನಾವು ಆರ್ಯರು ಎಂಬ ನಾಜಿಗಳ ಕಾಲದ ಹಮ್ಮಿನವರು ಕೆಲವರು ಉಳಿದಿದ್ದಾರೆ. ವರ್ಣೀಯರ ಬಗ್ಗೆ ಅವರಲ್ಲಿ ಶಂಕೆ ಅಸಹನೆಗಳಿವೆ. ಜರ್ಮನಿಯಲ್ಲಿ 'ವಲಸೆಗಾರರನ್ನು ಹೊರತಳ್ಳಬೇಕು, ನಮ್ಮ ಜರ್ಮನ್‌ತನ ಉಳಿಸಿಕೊಳ್ಳಬೇಕು' ಎಂಬ ನವನಾಜಿಗಳು ಸಹ ಕಾಣಿಸಿಕೊಂಡಿದ್ದಾರೆ. ಆದರೆ ಅವರ ಪ್ರಭಾವ ದೊಡ್ಡದಾಗಿಲ್ಲ.

ಅಚ್ಚುಕಟ್ಟುತನ, ಶಿಸ್ತು ಗಾಂಭೀರ್ಯಗಳು ಮಾನವೀಯ ನೆಲೆಯಲ್ಲಿದ್ದರೆ ದೇಶ ಕಟ್ಟುವ ಪರಿಕರಗಳಾಗುತ್ತವೆ; ನಾವು ಉಳಿದವರಿಗಿಂತ ಶ್ರೇಷ್ಠರೆಂಬ ಅಹಮಿಕೆಯಲ್ಲಿದ್ದರೆ ದ್ವೇಷ ಹುಟ್ಟಿಸುತ್ತವೆ. ಜನಾಂಗದ್ವೇಷದಿಂದ ಲಕ್ಷಾಂತರ ಜನರ ಹತ್ಯೆಗೈದ ನಾಜಿಗಳಿದ್ದ ಸಮಾಜವು, ಈಗ





ಮ್ಯೂನಿಕ್ ವಿವಿಯ ಪ್ರೊ. ಜೊಯ್ಡೆನ್ ಬೊಸ್

ಈಗಿನ ಜರ್ಮನಿಯೇ ಬೇರೆ. ರೈನ್ ಹೊಳೆಯಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. ಮ್ಯೂನಿಕ್ ಹಲವು ದೇಶಗಳಿಂದ ವಲಸಿಗರಿಂದ ಕೂಡಿ ಕಾಸ್ಮೊಪಾಲಿಟನ್ ನಗರವಾಗುತ್ತಿದೆ. ಆಫ್ಘನ್ನರು, ಇರಾಕಿಗಳು, ಟರ್ಕಿಗಳು, ಇಟಾಲಿಯನ್ನರು, ಭಾರತೀಯರು ಅಲ್ಲಿ ನೆಲೆಸಿದ್ದಾರೆ. ನಾವಿದ್ದ ಪ್ರದೇಶದಲ್ಲಿ ಟರ್ಕಿಗಳು ಮತ್ತು ಏಶಿಯನ್ನರು ಹೆಚ್ಚಾಗಿದ್ದರು. ಸಾಮಾನ್ಯವಾಗಿ ಸಂಪ್ರದಾಯಸ್ಥ ಜರ್ಮನರು ಅಲ್ಲಿ ವಾಸಿಸುವುದಿಲ್ಲವಂತೆ; ಅವರ ಪಾಲಿಗದು ಕೊಳೆಗೇರಿಯಂತೆ. ಅದುವೋ ಸೌಕರ್ಯ ಸಿರಿವಂತಿಕೆಗಳಿಂದ ಬೆಂಗಳೂರಿನ ಸದಾಶಿವನಗರಕ್ಕಿಂತ ಮಿಗಿಲಾಗಿತ್ತು.

ನಾವು ಮ್ಯೂನಿಕ್ ವಿಶ್ವವಿದ್ಯಾಲಯದಲ್ಲಿ ಭೇಟಿಮಾಡಿದ ಭಾರತಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಜೊಯ್ಡೆನ್ ಬೋಸರ ಪ್ರಕಾರ, ವಲಸಿಗರ ಬಗ್ಗೆ ಸಹನಶೀಲತೆ ತೋರಲು ಬಲವಾದ ಕಾರಣವಿದೆ. ಅದಕ್ಕೆ ಕಷ್ಟಪಟ್ಟು ಗೇಯುವವರ, ಅದರಲ್ಲೂ ಐಟಿ ತಂತ್ರಜ್ಞಾನದ ಎಂಜಿನಿಯರುಗಳ ಅಗತ್ಯವಿದೆ. ಮ್ಯೂನಿಕ್, ನಮ್ಮ ಬೆಂಗಳೂರು ಹೈದರಾಬಾದುಗಳಂತೆ ಸಾಫ್ಟ್‌ವೇರಿನ ಕಣಿವೆ. ದೀಪುಗೌರಿಯರ ಹಾಗೆ ಇಲ್ಲಿ ಭಾರತೀಯ ತರುಣ ತರುಣರು ಯಥೇಚ್ಛವಾಗಿದ್ದಾರೆ. ಸರ್ಕಾರದ ವೇತನ ಸಮಾನತಾ ನೀತಿಯ ಕಾರಣದಿಂದ, ಅಮೆರಿಕಕ್ಕೆ ಹೋಲಿಸಿದರೆ ಇಲ್ಲಿ ಸಂಬಳ ಕಡಿಮೆಯಂತೆ; ಆದಾಯ ತೆರಿಗೆ ಹೆಚ್ಚಂತೆ; ಹಣ ಮಾಡಬಯಸುವ ವೈದ್ಯರುಇಂಜಿನಿಯರುಗಳು ಸಾಮಾನ್ಯವಾಗಿ ಜರ್ಮನಿಗೆ ಬರುವುದಿಲ್ಲವಂತೆ. ಹೀಗಾಗಿ ವೃತ್ತಿಪರಿಣತರಾಗಿ ಬರುವ ಭಾರತೀಯರ ಬಗ್ಗೆ ಜರ್ಮನ್ನರಿಗೆ ಆದರವಿದೆ. ಇದುವೇ ಜರ್ಮನಿಯ ಆರ್ಥಿಕತೆಯನ್ನು ಸದಾ ಸ್ಥಿರವಾಗಿರಲು ಕಾರಣವೂ ಆಗಿದೆ.

ಒಂದಕ್ಕೊಂದು ಅಂಟಿಕೊಂಡಿರುವ ಯೂರೋಪಿನ ದೇಶಗಳಲ್ಲಿ ಶತಮಾನಗಳಿಂದ ನಿರಂತರ ಅಂತರ್ವಲಸೆ ನಡೆದಿದೆ. ಕೆಲವು ದೇಶಗಳಿಗೆ ಅವುಗಳ ವಸಾಹತುಗಳಿಂದಲೂ ಜನ ಗುಳೆ ಬಂದರು. ಭಾರತ, ಇಂಡೊನೇಶಿಯಾ, ಆಫ್ರಿಕಾಗಳಲ್ಲಿ ಡಚ್ ವಸಾಹತು ನೆಲೆಗಳಿದ್ದ ಕಾರಣ, ಆಮ್ಸ್‌ಟರ್‌ಡ್ಯಾಂ ಬಹುಭಾಷಿಕ, ಬಹುಜನಾಂಗಿಕ, ಬಹುಸಾಂಸ್ಕೃತಿಕ ನಗರವಾಗಿದೆ. ಯೂರೋಪು ಚಾರಿತ್ರಿಕ ಮತ್ತು ಆರ್ಥಿಕ ಕಾರಣಗಳಿಂದ ಎಷ್ಟೇ ಉದಾರವಾದಿ ಆಗುತ್ತಿದ್ದರೂ, ಬಿಳಿಹೆಣ್ಣು ಕಪ್ಪುಗಂಡು ಅಥವಾ ಉಲ್ಟಾ ಜೋಡಿಗಳನ್ನು ನಾವು ಜರ್ಮನಿಯಲ್ಲಿ ಕಾಣಲಿಲ್ಲ. ಇವು ಫ್ರಾನ್ಸ್ ಅಮೆರಿಕಗಳಲ್ಲಿ ಸಾಮಾನ್ಯವಂತೆ. ಮ್ಯೂನಿಕ್ ಏರ್‌ಪೋರ್ಟಿನಲ್ಲಿ ಒಬ್ಬ ಕಪ್ಪುವರ್ಣೀಯ ಅಧಿಕಾರಿಯನ್ನು ಕಂಡೆವು. ಉಳಿದಂತೆ ಆಫ್ರಿಕನ್ನರು ಬೀದಿಕಸ ಎತ್ತುವ, ಹೂಗುಚ್ಛ ಮಾರುವ, ಅಂಗಡಿ ಮುಂಗಟ್ಟುಗಳಲ್ಲಿ ಸೆಕ್ಯುರಿಟಿ ಗಾರ್ಡುಗಳಾಗಿರುವ ಕೆಳಹಂತದ ಕೆಲಸಗಳಲ್ಲೇ ಹೆಚ್ಚಿದ್ದರು. ರೋಮ್ ಮತ್ತು ವೆನಿಸುಗಳಲ್ಲೂ ಟರ್ಕಿಗರು, ಆಫ್ರಿಕನ್ನರು, ಬಂಗಾಳಿಗಳು, ಬಾಂಗ್ಲಾದೇಶಿಗರು ಬೀದಿವ್ಯಾಪಾರಿಗಳಾಗಿ ಮತ್ತು ಪ್ರವಾಸಿ ಗೈಡುಗಳಾಗಿ ದುಡಿಯುತ್ತಿದ್ದರು. ಇವರಿಗೆ ಹೋಲಿಸಿದರೆ ಮ್ಯೂನಿಕ್ಕಿನ ಆಫ್ರಿಕನರು ಹೆಚ್ಚು ಘನತೆಯಿಂದ ಇದ್ದರು. ವಿಮಾನ ನಿಲಾಣದಲ್ಲಿ ಗುಡಿಸುತ್ತಿದ್ದ ಒಬ್ಬ ಕಪ್ಪುಮಹಿಳೆ, ನೆಲದಲ್ಲಿ ಬಿದ್ದಿದ್ದ ಹತ್ತುಸೆಂಟಿನ ನಾಣ್ಯವನ್ನು ಹೆಕ್ಕಿಕೊಳ್ಳದೆ ಗುಡಿಸಿಹಾಕಿದಳು.

ಭಾರತೀಯರಿಗೆ ಹೋಲಿಸಿದರೆ, ಜಪಾನ್, ಕೊರಿಯ, ಚೀನಾದ ಪ್ರವಾಸಿಗರಿಂದ ಜರ್ಮನಿಯು ತುಳುಕಾಡುತ್ತಿತ್ತು. ವಾಚಾಳಿಗಳಾದ ನಮಗೇ ತಲೆಚಿಟ್ಟು ಹಿಡಿಸುವಷ್ಟು ಮಾತು, ನಿಷ್ಕಾರಣ ನಗು ಅವರದ್ದು. ಇದಕ್ಕೆ ಬೇಕಾಗಿ ಬರ್ಲಿನ್ ಏರ್‌ಪೋರ್ಟಿನಲ್ಲಿ ಚೀನಾದ ಮ್ಯಾಂಡರಿನ್ ಲಿಪಿಯ ಸೂಚನಾಫಲಕಗಳಿದ್ದವು. ಯೂರೋಪಿನಾದ್ಯಂತ ಚೀನೀ ಉದ್ಯಮಗಳು ಅವನ್ನು ಹಿಂಬಾಲಿಸಿ ಚೀನೀ ಹೋಟೆಲುಗಳೂ ಬಂದು ನೆಲೆಸಿವೆ. ಕಳೆದ ಶತಮಾನಗಳಲ್ಲಿ ಏಶಿಯಾಆಫ್ರಿಕಾಗಳನ್ನು ಆಕ್ರಮಿಸಿಕೊಂಡು ಆಳಿದ ಲೂಟಿಕೋರರನ್ನೂ ಯುದ್ಧದಾಹಿಗಳನ್ನೂ ಸರ್ವಾಧಿಕಾರಿಗಳನ್ನೂ ಯೂರೋಪು ಹುಟ್ಟಿಸಿತ್ತು. ಈಗದರ ಮಾರುಕಟ್ಟೆಯನ್ನು ಚೀನಾ ಸದ್ದುಗದ್ದಲವಿಲ್ಲದೆ ಆಳಲಾರಂಭಿಸಿದೆ. ಭಾರತೀಯರಲ್ಲಿ ಮತ್ತು ಆಫ್ರಿಕನ್ನರಲ್ಲಿ ಇಲ್ಲದ ಆತ್ಮವಿಶ್ವಾಸವು ಚೀನಿಯರಲ್ಲಿ ಕಂಡಿತು. ಅವರು ಜರ್ಮನಿಯ ಶಿಸ್ತನ್ನು ಮನಸಾರೆ ಮುರಿಯುತ್ತಿದ್ದರು. ವಲಸಿಗರ ದೈನ್ಯ ಅಥವಾ ಆತ್ಮವಿಶ್ವಾಸಗಳಿಗೂ, ಆಯಾ ದೇಶಕ್ಕೆ ಅವರ ಕೊಡುಗೆಗೂ ನೇರ ಸಂಬಂಧವಿರುತ್ತದೆ.

ಮ್ಯೂನಿಕ್ಕಿನ ಚಾತುರ್ಮಾಸ್ಯ ಮುಗಿಸಿ, ಮರಳಿ ಮನೆಗೆ ಹೊರಡಲು ಗಂಟುಮೂಟೆ ಕಟ್ಟುವಾಗ, ಮಳೆಮೋಡಗಳೂ ಚಳಿಯ ಗದಗದವೂ ಇಲ್ಲದೆ ವಾತಾವರಣ ಮತ್ತಷ್ಟು ಹಿತಕರಗೊಂಡಿತ್ತು.

ಪ್ರತಿಕ್ರಿಯಿಸಿ: **feedback@sudha.co.in**